ಓರ್ವ ಪ್ರಸಿದ್ಧ ಬಾಲ ಕಲಾಕಾರರಾಗಿದ್ದರು. ಹಾಗಾಗಿ ಅವರಿಗೆ ದೂರದರ್ಶನ ಚಾನೆಲ್‌ಗಳ ಸಾಕಷ್ಟು ಪರಿಚಯವಿತ್ತು. ಇದರಿಂದಾಗಿ ಭಾವೇಶ್ ಅವರ ಮೋಂಬತ್ತಿಯ ಪ್ರದರ್ಶನದ ವಿಷಯ ಮಹಾರಾಷ್ಟ್ರದ ಮನೆ ಮನೆಗೆ ತಲುಪಲು ಸಾಧ್ಯವಾಯಿತು. ಪ್ರದರ್ಶನದ ಕರಪತ್ರಗಳು ಕೂಡಾ ಮುದ್ರಿತವಾದವು. ಅವುಗಳ ವಿತರಣೆಯ ವಿಷಯ ಬಂದಾಗ, ಅದಕ್ಕೆ ಬಹಳಷ್ಟು ಖರ್ಚಾಗುತ್ತದೆ, ಹಣ ತೊಡಗುತ್ತದೆ ಎಂದು ತಿಳಿದು ಬಂತು. ಕಾರಣ 50,000ಕ್ಕೂ ಹೆಚ್ಚು ಕರಪತ್ರಗಳು ಮುದ್ರಿತವಾಗಿದ್ದವು. ಅವೆಲ್ಲವನ್ನೂ ದಿನಪತ್ರಿಕೆಯಲ್ಲಿ ಹಾಕಿ ವಿತರಿಸುವುದು ಕಠಿಣ ಕೆಲಸವಾಗಿತ್ತು. ಆ ಸಮಾಚಾರ ಪತ್ರಿಕೆಗಳನ್ನು, ವಿತರಿಸುವ ಸಂಘಟನೆಯ ಅಧ್ಯಕ್ಷರನ್ನು ಭೇಟಿಯಾದರು. ತಮ್ಮ ಈ ಪ್ರಾಜೆಕ್ಟ್ ಮತ್ತು ಪ್ರದರ್ಶನದ ಬಗ್ಗೆ ವಿವರಿಸಿ ಹೇಳಿದರು. ಇವರ ಮಾತುಗಳನ್ನು ಕೇಳಿದ ಮೇಲೆ ಅವರು ಹೇಳಿದ ಮಾತುಗಳು ಇವರನ್ನು ಚಕಿತರನ್ನಾಗಿ ಮಾಡಿತು. ಅವರು ಒಂದು ರೂಪಾಯಿ ಕೂಡಾ ತೆಗೆದುಕೊಳ್ಳದೆ ಇವೆಲ್ಲವನ್ನೂ ವಿತರಣೆ ಮಾಡಿಸುತ್ತೇನೆ ಎಂದರು! ನಮ್ಮ ಕೆಲಸ ಶ್ರದ್ಧೆ ಮತ್ತು ಶ್ರಮದ್ದಾಗಿದ್ದರೆ, ಅದು ಸರಿ ಹಾದಿಯ ಪಯಣವಾದರೆ, ಒಂದು ಒಳ್ಳೆಯ ಕೆಲಸಕ್ಕೆ ನೂರು ಕೈಗಳು ಸಹಾಯಕ್ಕೆ ಧಾವಿಸುತ್ತವೆ.

ಅವರು ಪುಣೆಯ ಪ್ರಮುಖ ಕ್ಷೇತ್ರಗಳ ಸಮಾಚಾರ ಪತ್ರಿಕೆ ಹಂಚುವ ಜನರನ್ನು ಕರೆದರು. ಅವರಿಗೆ ವಿಶೇಷ ನಿರ್ದೇಶನ ಕೊಟ್ಟರು. ಈ ಕರಪತ್ರಗಳನ್ನು, ಕರಪತ್ರಗಳಂತೆ ಹಂಚುವುದಲ್ಲ. ಗ್ರಾಹಕರಿಗೆ 'ಪತ್ರಿಕೆಯಲ್ಲಿ ಉಳಿದದ್ದು ಓದಿ, ಬಿಡಿ. ಈ ಕರಪತ್ರ ಮಾತ್ರ ದಯವಿಟ್ಟು ಓದಿ' ಎಂದು ಹೇಳಿ ಕೊಡಬೇಕು ಎಂದರು. ನಂಬಲಾರದ ಚಮತ್ಕಾರಗಳು ನಡೆಯುತ್ತಿದ್ದವು. ಇವೆಲ್ಲವೂ ವಿಶ್ವಾಸದ ಚಮತ್ಕಾರವಾಗಿತ್ತು. ಇಂತಹ ಪವಾಡಗಳ ಸರಮಾಲೆಯೇ ಭಾವೇಶ್ ಅವರ ಈ ಪ್ರದರ್ಶನಕ್ಕೆ ಬೆನ್ನೆಲುಬಾಯಿತು, ಬೆಂಬಲವಾಯಿತು.

ಆ ದಿನಗಳಲ್ಲಿ ಭಾವೇಶ್ ಅವರಿಗೆ ಓಷೋ ಅವರ ಒಂದು ಮಾತು ಮತ್ತೆ ಮತ್ತೆ ನೆನಪಿಗೆ ಬಂದಿತು; 'ನಿಮಗೆ ನಿಮ್ಮ ಲಕ್ಷ್ಯದ ಬಗ್ಗೆ ದೃಢ ನಂಬಿಕೆ ಇದ್ದರೆ, ನಿಮ್ಮ ಉದ್ದೇಶವನ್ನು ಯಶಸ್ವಿಯಾಗಿಸಲು ಪೂರಾ ಬ್ರಹ್ಮಾಂಡವೇ ನಿಮ್ಮೊಡನೆ ಕೈ ಜೋಡಿಸುತ್ತದೆ'. ಪ್ರಸಿದ್ಧ ಲೇಖಕ ಪಾಲೋ ಕೋಲ್ಹೋ ಅವರ 'ದಿ ಆಲ್ಕೆಮಿಸ್ಟ್' ಕಾದಂಬರಿಯಲ್ಲಿಯೂ ಇಂತಹುದೇ ವಾಕ್ಯವಿದೆ. ಭಾವೇಶ್ ಅವರಿಗೆ ಆ ಕ್ಷಣ ತನ್ನೊಡನೆ ಬ್ರಹ್ಮಾಂಡವೇ ಜೊತೆಯಾಗಿದೆ ಅನಿಸಿತ್ತು. ಅವರೊಡನೆ ಕೈ ಜೋಡಿಸುತ್ತಿದ್ದವರೆಲ್ಲ ಬದುಕಿನುದ್ದದ ಸಂಗಾತಿಗಳಾಗಲಿದ್ದರು. ಆ ಕ್ಷಣದ ಲಾಭದ, ಲೆಕ್ಕಾಚಾರದ, ವ್ಯಾಪಾರದ ಸಂಬಂಧಗಳು ಇವು ಆಗಿರಲಿಲ್ಲ. ಅದೆಷ್ಟೋ ಜನ ಈ ತಿಲಕ್ ಸ್ಮಾರಕ ಪ್ರದರ್ಶನವನ್ನು ಯಶಸ್ವಿಯಾಗಿಸಲು ಸೊಂಟ ಕಟ್ಟಿ ದುಡಿಯಲು ನಿಂತಿದ್ದರು. ಜೂನ್ ತಿಂಗಳ ಕೊನೆಯಲ್ಲಿ ಸಚಿನ್ ಅವರು ಒಂದು ಪ್ರೆಸ್ ನೋಟ್ ತಯಾರಿಸಿ, ಎಲ್ಲ ದಿನಪತ್ರಿಕೆಗಳ ಸಂಪಾದಕರಿಗೆ ಕಳುಹಿಸಿದರು. ಜುಲೈ ತಿಂಗಳ ಮೊದಲ ವಾರದಲ್ಲಿ ಒಂದು ಪತ್ರಿಕಾಗೋಷ್ಠಿಯನ್ನು ಕೂಡ ಕರೆದರು. ಇದರ ಪರಿಣಾಮವಾಗಿ ಹಿಂದಿ, ಮರಾಠಿ ಮತ್ತು ಇಂಗ್ಲಿಷ್ ಭಾಷೆಯ ಪ್ರಸಿದ್ಧ ಸಮಾಚಾರ ಪತ್ರಿಕೆಗಳಲ್ಲಿ ಭಾವೇಶ್ ಮತ್ತು ಅವರು ತಯಾರಿಸಿದ ಮೋಂಬತ್ತಿಗಳ ಫೋಟೋಗಳ ಜೊತೆಗೆ ಪ್ರದರ್ಶನದ ವಿವರಗಳು ಪ್ರಕಟವಾದವು.

ಈ ಪ್ರದರ್ಶನಕ್ಕೆ ಭಾವೇಶ್ ಮೋಂಬತ್ತಿಗಳನ್ನು ತಯಾರಿಸಲು ಆರಂಭಿಸಿದಾಗ, ಸಚಿನ್ ಮತ್ತು ಸಾಹಿಲೀ ಭಾಭಿ ಒಂದು ಸಲಹೆ ನೀಡಿದ್ದರು. ಕೆಲವು ಮೋಂಬತ್ತಿಗಳನ್ನು ಮಾರಾಟಕ್ಕಲ್ಲ, ಪ್ರದರ್ಶನದಲ್ಲಿ ಆಕರ್ಷಣೆಗೆಂದೇ ಇಡಲು ತಯಾರಿಸಿ. ಈ ಸಲಹೆಯ ಪ್ರಕಾರ ಭಾವೇಶ್ 4 ಅಡಿ ಚಚ್ಚೌಕದ 80 ಕಿಲೋಗಳ ಎರಡು ಮೇಣದ ಚೆಸ್ ಬೋರ್ಡ್ ತಯಾರಿಸಿದರು. 200 ಕಿಲೋ ಮೇಣದ ಒಂದು ದೊಡ್ಡ ಕೋಟೆಯನ್ನು ವಿನ್ಯಾಸ ಮಾಡಿದರು. ಅದಲ್ಲದೆ ಆರು ಆರು ಅಡಿಯ, ಒಂದೊಂದೂ 150 ಕಿಲೋ ತೂಕದ ದೊಡ್ಡ ಮೊಂಬತ್ತಿಗಳನ್ನು ಪ್ರದರ್ಶನದ ಪ್ರವೇಶ ದ್ವಾರದಲ್ಲಿ ಇಡಲು ಸಿದ್ಧ ಮಾಡಿದರು. ಅವುಗಳ ಮೇಲೆ ಬಣ್ಣ ಬಣ್ಣದ ದುಪ್ಪಟ್ಟಾಗಳನ್ನು ಹಾಕಿ ಅಲಂಕರಿಸಬಯಸಿದರು. ಫಿನೋಲೆಕ್ಸ್ ಪೈಪ್ ಕಂಪನಿಯೊಡಗೂಡಿ ಆ ದೊಡ್ಡ ಮೋಂಬತ್ತಿಗಳಿಗೆ ಬೇಕಿದ್ದ ಅಚ್ಚುಗಳನ್ನು ತಯಾರಿಸಿದ್ದರು. ಈ ವಿಶೇಷ ಮೋಂಬತ್ತಿಗಳ ಬಗ್ಗೆ ಯೋಚಿಸಿ, ವಿನ್ಯಾಸ ಮಾಡಿ, ತಯಾರಿಸುವುದರಲ್ಲಿಯೇ ಭಾವೇಶ್ ಅವರಿಗೆ ಎರಡು ತಿಂಗಳು ಹಿಡಿದಿತ್ತು.

ಮುದ್ರಣ ಮಾಧ್ಯಮ ಮತ್ತು ಎಲೆಕ್ಟ್ರಾನಿಕ್ ಮಾಧ್ಯಮದ ಮೂಲಕ, ಓರ್ವ ಅಂಧ ವ್ಯಕ್ತಿಯಿಂದ ತಯಾರಾದ ಮೋಂಬತ್ತಿಗಳ ಬೃಹತ್ ಪ್ರದರ್ಶನ ಇದೆ ಎಂಬ ಸುದ್ದಿ ಸುತ್ತಲೂ ಕಾಡ್ಗಿಚ್ಚಿನಂತೆ ಹರಡಿತ್ತು. ಸಾಕಷ್ಟು ದೂರವಾಣಿ ಕರೆಗಳು ಬರುತ್ತಿದ್ದವು. ಬಹಳಷ್ಟು ಜನ ಭೆಟ್ಟಿಯಾಗಲು ಬರತೊಡಗಿದರು. ಅವರೆಲ್ಲರೂ ಈ ಪ್ರದರ್ಶನದಲ್ಲಿ ಕೈಜೋಡಿಸಬಯಸಿದ್ದರು. ತಮ್ಮ ಕಡೆಯಿಂದ ಏನಾದರೂ ಸಹಾಯ ಮಾಡಲು ಇಚ್ಛಿಸುತ್ತಿದ್ದರು. ಅವರೆಲ್ಲರಲ್ಲಿ ಭಾವೇಶ್ ಅವರದು ಒಂದೇ ಪ್ರಾರ್ಥನೆ ಆಗಿತ್ತು; ನೀವು ದಯವಿಟ್ಟು, ಒಂದು ನೂರು ಜನರಿಗೆ ಈ ಪ್ರದರ್ಶನದ ಬಗ್ಗೆ ತಿಳಿಸಿ.

ಒಂದು ದಿನ, ಒಂದು ದೊಡ್ಡ ತಂಡ ಭಾವೇಶ್ ಅವರನ್ನು ಭೆಟ್ಟಿಯಾಗಲು ಬಂದಿತು. ಅವರೆಲ್ಲರೂ ಪುಣೆಯ ಫಿಲ್ಮ್ ಸಿಟಿಯ ವಿದ್ಯಾರ್ಥಿಗಳು. ಅವರು ಬೇರೆ ಬೇರೆ ದೇಶಗಳಿಂದ ಅಲ್ಲಿ ವಿದ್ಯಾಭ್ಯಾಸ ಮಾಡಲು ಬಂದಿದ್ದರು. ಅವರಲ್ಲಿ ಕೆಲವರು ಪ್ರೊಡಕ್ಷನ್ ಕೆಲಸವನ್ನು ಕಲಿಯುತ್ತಿದ್ದರು. ಮತ್ತೆ ಕೆಲವರು ಚಿತ್ರಕತೆ ಬರೆಯುವುದರಲ್ಲಿ ಪರಿಣತಿ ಪಡೆಯುತ್ತಿದ್ದರು. ಹೀಗೆ ವಿವಿಧ ಕ್ಷೇತ್ರಗಳಲ್ಲಿ ನಿರತರಾದ ತಂಡವದು. ಅವರೊಡನೆ ಅವರ ಪ್ರೊಫೆಸರ್ ಕೂಡಾ ಬಂದಿದ್ದರು. ಅವರೆಲ್ಲರೂ ಭಾವೇಶ್ ಅವರ ಈ ಪ್ರದರ್ಶನದ ಜೊತೆಗೆ ಕೈಜೋಡಿಸಲು ಬಯಸಿದ್ದರು. ಅವರು ಈ ಇಡೀ ಪ್ರದರ್ಶನವನ್ನು ಅಲಂಕರಿಸಿ ಸಿದ್ಧ ಮಾಡುವ ಕೆಲಸವನ್ನು ತಮ್ಮ ಹೆಗಲಿಗೆ ಹೊತ್ತರು. ಮೊದಲಿಗೆ ಅವರುಗಳು ತಿಲಕ್ ಸ್ಮಾರಕಕ್ಕೆ ಹೋಗಿ ನೋಡಿದರು. ಅದರೊಡನೆ ಭಾವೇಶ್ ಅವರು ತಯಾರಿಸುತ್ತಿದ್ದ ಮೋಂಬತ್ತಿಗಳನ್ನು ಅರ್ಥ ಮಾಡಿಕೊಂಡರು. ಮೋಂಬತ್ತಿಗಳು ಅನೇಕ ವಿಧವಿದ್ದವು; ದೀಪಗಳು, ಹೂವುಗಳು, ಮೊಗ್ಗುಗಳು, ಕಾರ್ಟೂನಿನ ಪಾತ್ರಗಳು ಇತ್ಯಾದಿ.

ಆಗ ಅವರು ಕೇಳಿದರು 'ನೀವು ಹಿಮದ ಗಡ್ಡೆಯನ್ನು ಮಾಡಬಲ್ಲಿರಾ?' ಭಾವೇಶ್ 'ಹಾಂ, ನಾನು ಮಾಡಬಲ್ಲೆ' ಎಂದರು. ಆ ದಿನಗಳಲ್ಲಿ ಅವರ ಆತ್ಮವಿಶ್ವಾಸ ಮುಗಿಲು ಮುಟ್ಟಿತ್ತು.

ಹೂವಿನ ಆಕಾರದ ತೇಲುವ ಮೋಂಬತ್ತಿಗಳನ್ನು ನೋಡಿದ ವಿದ್ಯಾರ್ಥಿಗಳು, ಮರದಿಂದ ಒಂದು ಸಣ್ಣ ಉದ್ಯಾನವನವನ್ನು ಆ ಹಾಲ್‌ನಲ್ಲಿ ನಿರ್ಮಾಣ ಮಾಡಲಿದ್ದರು. ಫ್ರೆಂಡ್‌ಶಿಪ್ ಡೇ ಜುಲೈ ತಿಂಗಳಲ್ಲಿಯೇ ಬರಲಿತ್ತು. ಹಾಗೆಂದೇ ಆ ವಿಷಯವನ್ನು ಹಿಡಿದು ಒಂದು ಮೂಲೆಯನ್ನು ಅಲಂಕರಿಸಿದರು. ಮಕ್ಕಳಿಗೆಂದು ತಯಾರಿಸಿದ್ದ ಕಾರ್ಟೂನ್ ಬೊಂಬೆಯಾಕೃತಿಯ ಮೋಂಬತ್ತಿಗಳನ್ನು ಮತ್ತೊಂದೆಡೆ ಥರ್ಮಾಕೋಲ್‌ನಿಂದ ಸೆಟ್ ಹಾಕಿ ಸುಂದರವಾಗಿ ಜೋಡಿಸಿದರು. ಸುಮಾರು ಆರು ಅಡಿ ವ್ಯಾಸದ ಒಂದು ಸಿಮೆಂಟಿನ ಬಾನಿಯನ್ನು ಪ್ರದರ್ಶನದ ನಡುಮಧ್ಯೆ ಇಟ್ಟು, ಅದರಲ್ಲಿ ನೀರು ತುಂಬಿ, ಹೂವುಗಳ ಆಕಾರದ ಫ್ಲೋಟಿಂಗ್ ಕ್ಯಾಂಡಲ್ಸ್ ಅನ್ನು ಅದರಲ್ಲಿ ತೇಲಿ ಬಿಟ್ಟರು. ಅವುಗಳನ್ನು ನಂತರ ಉರಿಸಲಿದ್ದರು. ಈ ಎಲ್ಲ ಸೆಟ್ ಮತ್ತು ಅಲಂಕಾರಕ್ಕೆ ಸುಮಾರು ಮೂರುಮೂರೂವರೆ ಲಕ್ಷ ರೂಪಾಯಿ ಹಣ ಬೇಕಿತ್ತು. ಅದೆಲ್ಲವನ್ನು ಅವರು ತಮ್ಮ ಜೇಬಿನಿಂದ ಹಾಕಿದ್ದರು! ಅವರು ಹೇಳಿದ್ದರು: 'ನಿಮ್ಮ ಪ್ರದರ್ಶನ ಯಶಸ್ವಿಯಾದರೆ, ನಮಗೆ ಕೇವಲ ಮೂಲ ಹಣವನ್ನು ಹಿಂತಿರುಗಿಸಿ'. ಫಿಲ್ಮ್ ಸಿಟಿಯ ತಮ್ಮ ವಿದ್ಯಾಭ್ಯಾಸಕ್ಕೆ ಪೂರಕವಾದ ಒಂದು ಪ್ರಾಜೆಕ್ಟ್ ರೀತಿಯಲ್ಲಿ ಅವರು ಆ ಪ್ರದರ್ಶನವನ್ನು ತೆಗೆದುಕೊಂಡಿದ್ದರು. ಪುಣೆಯಲ್ಲಿ ಮಂಗೇಶ್ ತೆಂಡೂಲ್ಕರ್ ಅವರ ಮಗಳ ಬಹು ದೊಡ್ಡ ಮುದ್ರಣಾಲಯ ಇದೆ. ಅವರು ತಿಲಕ್ ಸ್ಮಾರಕ ಪ್ರದರ್ಶನಕ್ಕೆ ಬೇಕಾದ ಎಲ್ಲ ಆಮಂತ್ರಣ ಪತ್ರಗಳನ್ನೂ ಉಚಿತವಾಗಿ ಮುದ್ರಿಸಿಕೊಡುವುದಾಗಿ ಆಶ್ವಾಸನೆ ನೀಡಿದ್ದರು.

ನೂರಾರು ಜನ ಭಾವೇಶ್ ಅವರ ಈ ಪ್ರದರ್ಶನಕ್ಕೆ ಕೈ ಜೋಡಿಸಿದ್ದರು. ನೋಡನೋಡುತ್ತಿದ್ದಂತೆ ಅವರ ಪರಿಚಿತ ವಲಯ, ಸ್ನೇಹದ ಸಾಗರ ಹಿಗ್ಗಿ ಹರಡಿತ್ತು. ಭಾವೇಶ್ ಅವರ ಮುಗುಳ್ನಗೆಯ ಮೊಗ, ಶ್ರಮಕ್ಕೆ ಹಿಂಜರಿಯದ ಮನೋಭಾವ, ಬದುಕು ಪ್ರೀತಿಯ ಉತ್ಸಾಹ, ಅವರೆಲ್ಲರಲ್ಲಿ ಇವರೊಡನೆ ಜೊತೆಯಾಗುವ ಇಚ್ಛೆಯನ್ನು ಜಾಗೃತಗೊಳಿಸಿತ್ತು. ಭಾವೇಶ್ ಅವರು ಮೋಂಬತ್ತಿ ಆಕಾರದ ಹೂಬಹೂ ಪಾಪ್ ಅಪ್ ಕಾರ್ಡ್ ರೀತಿಯಲ್ಲಿ ಆಮಂತ್ರಣ ಪತ್ರವನ್ನು ವಿನ್ಯಾಸ ಮಾಡಿದ್ದರು. ಅದನ್ನು ಎರಡು ಭಾಗವಾಗಿ ತೆರೆಯಬಹುದಾಗಿತ್ತು. ಆ ಕಾರ್ಡ್‌ನ ಒಳಗೆ ಈ ಪ್ರದರ್ಶನವನ್ನು ಕುರಿತ ಮಾಹಿತಿ ಮುದ್ರಿತವಾಗಿತ್ತು.

(ಸಶೇಷ)